# ಕಲ್ಯಾಣ ಜ್ಯೋತಿ

Rotary



UNITE FOR GOOD
Rotary

## ರೋಟರಿ ಕ್ಲಬ್ ಕಲ್ಯಾಣಪುರ

## ROTARY CLUB KALLIANPUR

R.I. Dist. 3182, Zone III, Charter No. 22790 dt: 21.5.1985



**Rtn. Francesco Arezzo**
**RI President**



**Rtn. K. Palaksha**
**District Governor 2025-26**



**Rtn. PHF Anand Shetty**
**Zone 3, RI District 3182**



**Rtn. Raviraj Kidiyoor**
**Zonal Lieutenant**



**Rtn. Shashikanth Nayak**
**President 2025-26**



**Rtn. Sathish Sherigar**
**Secretary 2025-26**



## ಸಂಪಾದಕೀಯ........

**ರೊ| ನವೀನ್ ಕುಮಾರ್‌ಶೆಟ್ಟಿ (ಸಂಪಾದಕರು)**

ರೋಟರಿ ಕುಟುಂಬದವರಿಗೆ ನಮಸ್ಕಾರಗಳು.... ರೋಟರಿ ವರ್ಷದ ಒಂದು ತಿಂಗಳ ಸಮಯ ಮುಗಿಯಿತು. ಪದಪ್ರದಾನ ಸಮಾರಂಭವು ಅದ್ದೂರಿ ಯಾಗಿ ನಡೆದ ನಂತರ ಎಲ್ಲಾ ಕಾರ್ಯಕ್ರಮ ಒಂದೊಂದಾಗಿ ನಡೆಯುತ್ತಿದೆ. ಅದರೊಂದಿಗೆ ಎಲ್ಲಾ ಸದಸ್ಯರ ಒಡನಾಟ ಭಾಗವಹಿಸುವಿಕೆ ಸಂತೋಷ ಕೊಡುತ್ತಿದೆ. ನಮ್ಮ ವ್ಯಕ್ತಿತ್ವ ಬೆಳವಣಿಗೆ ಅದರೊಂದಿಗೆ ನಾವು ಮಾಡುವ ಸೇವೆ ಈ ಎರಡು ವಿಷಯ ನಮ್ಮನ್ನು ತೃಪ್ತವಾಗಿಸಿದೆ. ಮುಂದೆ ಕೂಡಾ ಹಲವಾರು ಕಾರ್ಯಕ್ರಮಗಳು ನಡೆಯ ಬೇಕಾಗಿದ್ದು ಅದರಲ್ಲಿ ಪ್ರಾಮುಖ್ಯವಾದ ಜಿಲ್ಲಾ ಕಾರ್ಯಕ್ರಮವಾದ Membership Development Seminar & Award Ceremony ನಮ್ಮ ಕ್ಲಬ್ ಆಯೋಜಿಸಿದ್ದು ಇದು ಕೂಡ ಯಶಸ್ವೀ ಆಗಬೇಕಾಗಿದೆ. ಎಲ್ಲರೂ ಇದರಲ್ಲಿ ಪಾಲ್ಗೊಂಡು ಇದನ್ನು ಯಶಸ್ವಿಗೊಳಿಸೋಣ.

# 2025-26 ಸಾಲಿನ ಪದಪ್ರಧಾನ ಸಮಾರಂಭವು




**2025-26 ಸಾಲಿನ ಪದಪ್ರಧಾನ ಸಮಾರಂಭವು** 03 ಜುಲೈ 2025 ಅಮೃತ್ ಗಾರ್ಡನ್‌ನಲ್ಲಿ ಭವ್ಯವಾಗಿ ಮತ್ತು ವಿಜಯೋತ್ಸವದ ಮನೋಭಾವದೊಂದಿಗೆ ಆಯೋಜಿಸಲಾಯಿತು. ಈ ವೇಳೆ, ಗೌರವಾನ್ವಿತ ರೋಟೇರಿಯನ್ ಶಶಿಕಾಂತ್ ನಾಯಕ್ ಮತ್ತು ರೋಟೇರಿಯನ್ ಸತೀಶ್ ಶೆರಿಗಾರ್ ತಮ್ಮ ನೂತನ ಪದವಿಗಳನ್ನು ಗೌರವದಿಂದ ಸ್ವೀಕರಿಸಿದರು. ಈ ಸಮಾರಂಭವು ನಮ್ಮ ರೋಟರಿ ಕ್ಲಬ್‌ನ ಯಶಸ್ಸಿನ ಹಾದಿಯಲ್ಲಿ ಒಂದು ಪ್ರಮುಖ ಹಂತವಾಗಿದ್ದು, ಮುಂದಿನ ಕಾರ್ಯಕಾಲದಲ್ಲಿ ಸೇವಾ ಚಟುವಟಿಕೆಗಳನ್ನು ಇನ್ನಷ್ಟು ಸಕ್ರಿಯವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸುವ ಸಂಕಲ್ಪವನ್ನು ಸದಸ್ಯರು ದೃಢಪಡಿಸಿದರು.. ಈ ಕಾರ್ಯಕ್ರಮದ ಯಶಸ್ಸಿಗೆ ಎಲ್ಲ ಸದಸ್ಯರ ಪರಿಶ್ರಮ, ಸಹಕಾರ ಮತ್ತು ಒಗ್ಗಟ್ಟೇ ಕಾರಣವಾಗಿದೆ. **ಈ ಹೊಸ ಆರಂಭವು ಕ್ಲಬ್‌ಗಾಗಿ ಯಶಸ್ಸಿನ ಹೊಸ ಅಧ್ಯಾಯಗಳ ಉದ್ಘಾಟನೆಯಾಗಲಿ ಎಂಬ ಆಶಯವಿದೆ.**



Rotary

UNITE FOR GOOD Rotary

## ಶಿಕ್ಷಕ ದಂಪತಿಗಳಾದ
## ಸುಬ್ರಮಣ್ಯ ಭಟ್ ಮತ್ತು ಲಕ್ಷ್ಮೀ ಟೀಚರ್ ಅವರನ್ನು ಸನ್ಮಾನ ಮಾಡಲಾಯಿತು





ನಮ್ಮ ರೋಟರಿ ಕ್ಲಬ್ ವಾರದ ಸಭೆಯಲ್ಲಿ **ಗುರುಪೌರ್ಣಿಮೆ**ಯ ಅಂಗವಾಗಿ ಶಿಕ್ಷಕರಿಗೆ ಗೌರವ ಸಲ್ಲಿಸಿರುವುದು ನಿಜಕ್ಕೂ ಕೃತಜ್ಞತೆಯ ಸರಳ ಸಾರ್ಥಕ ಉದಾಹರಣೆ. ಇಂತಹ ಕೃತಜ್ಞತಾಪೂರ್ವಕ ಕಾರ್ಯಕ್ರಮಗಳು ಸಮಾಜದಲ್ಲಿ ಗುರುಗಳ ಮಹತ್ವವನ್ನು ಬಿಂಬಿಸುವುದರ ಜೊತೆಗೆ, ಯುವ ಪೀಳಿಗೆಗೆ ಮೌಲ್ಯಾಧಾರಿತ ಸಂದೇಶವನ್ನು ನೀಡುವ ಬೆಳಕು ಬೀರುವ ಕಾರ್ಯವಾಗಿದೆ. ಇಂತಹ ಸಾಂಸ್ಕೃತಿಕ ಸ್ಪಂದನೆಗೆ ಅಭಿನಂದನೆಗಳು!

## Interact Club





ಮಿಲಾಗ್ರಿಸ್ ಕನ್ನಡ ಮೀಡಿಯಂ ಶಾಲೆಯ Interact Club ಇದರ ಪದಪ್ರದಾನ ಸಮಾರಂಭ ನಡೆಯಿತು. ಸಮಾರಂಭದಲ್ಲಿ ಸಾಧಕರಿಗೆ ಸನ್ಮಾನ ಮತ್ತು Interact ಅಧ್ಯಕ್ಷರ ಮತ್ತು ತಂಡಕ್ಕೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.




ಕೆಳಾರ್ಕಳಬೆಟ್ಟು ಶಾಲೆಯ ಅಂಗನವಾಡಿ ಕೇಂದ್ರಕ್ಕೆ ಒಂದು ಕಪಾಟು ಮತ್ತು 2 ಸ್ಟೀಲ್ ಡ್ರಂ ರೋಟರಿ ವತಿಯಿಂದ ಕೊಡಲಾಯಿತು. ಅಧ್ಯಕ್ಷ ಶ್ರೀ ಶಶಿಕಾಂತ್ ನಾಯಕ್, ಕಾರ್ಯದರ್ಶಿ ಶ್ರೀ ಸತೀಶ್, ರೋ| ರವಿ ಆಚಾರ್ಯ, ರೋ| ಕ್ಲಾರೆನ್ಸ್, ರೋ| ಪ್ರಕಾಶ್ ರೋ| ದಿವಾಕರ್ ಪಿ, ರೋ| ಸದಾನಂದ ನಾಯಕ್ ಉಪಸ್ಥಿತರಿದ್ದರು.

# ಮಾದಕ ವಸ್ತುವಿನ ದುರುಪಯೋಗ ತಡೆಗಟ್ಟುವಿಕೆ ಮತ್ತು ನಿರ್ವಹಣೆ







ಈ ಸಂದರ್ಭದಲ್ಲಿ ಕೆಳರ್ಕಳ ಬೆಟ್ಟು ಶಾಲೆಯಲ್ಲಿ ಮಾದಕ ವಸ್ತು ನಿರ್ವಹಣೆ ಮತ್ತು ತಡೆಗಟ್ಟುವಿಕೆ ಕಾರ್ಯಕ್ರಮ ನಡೆಯಿತು. ವಿನಯ್ ಕುಮಾರ್ ಕಬ್ಯಾಡಿ ಉಪನ್ಯಾಸ ನೀಡಿದರು. ಮಕ್ಕಳಿಂದ ಒಳ್ಳೆಯ ನಾಟಕ ಕಾರ್ಯಕ್ರಮಕ್ಕೆ ಸ್ಪೂರ್ತಿ ಆಯಿತು. ರೋ ಶಶಿಕಾಂತ್ ನಾಯಕ್, ರೋ ಸತೀಶ್, ರೋ ಪ್ರಕಾಶ್, ರೋ ಇಕ್ಬಾಲ್ ಹಮ್ಮಾಜಿ, ರೋ ಬ್ರಾನ್, ರೋ ಸದಾನಂದ ನಾಯಕ್, ರೋ ದಿವಾಕರ್, ರೋ ವಿಜಯ್ ಮೈಯ್ಯಾಡಿ. ಭಾಗವಹಿಸಿದ್ದರು.

# In The Memory Of Kargil Vijay Divas







ಕಾರ್ಗಿಲ್ ವಿಜಯ ದಿವಸದ ಸ್ಮರಣರ್ಥವಾಗಿ, ದೇಶದ CRPF ಈ ಸೈನ್ಯ ದಳದಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ್ದ ಕೊಡವೂರು ನಿವಾಸಿ **ಶ್ರೀ ದಾಮೋದರ ಬಂಗೇರ**ರನ್ನು ಅವರ ಪತ್ನಿಯವರೊಂದಿಗೆ ಅವರ ಸ್ವಗೃಹದಲ್ಲಿಯೇ ಗೌರವಪರ್ವಕವಾಗಿ ಸನ್ಮಾನಿಸಲಾಯಿತು. ದೇಶದ ರಕ್ಷಣೆಗೆ ಸೇವೆ ಸಲ್ಲಿಸಿದವರನ್ನು ಸ್ಮರಿಸುವುದು ನಮ್ಮ ಕರ್ತವ್ಯ ಮತ್ತು ಗೌರವ ಎಂದು ಈ ಸಂರ್ಭದಲ್ಲಿ ಅಭಿಪ್ರಾಯ ವ್ಯಕ್ತವಾಯಿತು."

With best compliments from

Rotary



**Rtn. Shashikanth Nayak & Family**

President 2025-26

Navami BAKERY

# NAVAMI PRODUCTS

Santhekatte, Kallianpura, UDUPI.

☎ 0820-2582068/9448261618

Navami BAKERY 28th ANNIVERSARY